ಈ) ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ? (ವಿವರಗಳನ್ನು ನೀಡುವುದು)

ಶ್ರೀ ಎ. ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆಸ್ಪತ್ರೆ ಮುಖ್ಯ ಕಟ್ಟಡವನ್ನು 15. 1. 2000ಕ್ಕೆ ಪೂರ್ಣಗೊಳಿಸಿ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಆಸ್ಪತ್ರೆಯ ಹೊರಭಾಗದ ಕಟ್ಟಡ ಕಾಮಗಾರಿಗಳನ್ನು 15. 11. 2000 ದಂದು ಪೂರ್ಣಗೊಳಿಸಲಾಗಿದೆ.

ಆ) ಕಾಮಗಾರಿಯ ಪರಿಷ್ಕೃತ ಅಂದಾಜು ರೂ. 162. 79 ಲಕ್ಷಗಳು. ರಾಷ್ಟ್ರೀಯ ಸ್ಪರ್ಧಾತ್ಮಕ ದರಗಳ ವಿಧಾನವನ್ನು ಅನುಸರಿಸಿ ನಂತರ ಕಾಮಗಾರಿಯನ್ನು ಶ್ರೀ ಎನ್. ನಾಗರಾಜ ಬಲ್ಲಾಳ್, ಉಡುಪಿ ಇವರಿಗೆ ವಹಿಸಲಾಯಿತು. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ದಿನಾಂಕ: 15- 1- 2000 ದಂದು ಆಡಳಿತ ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಹೆಚ್. ಟಿ. ವಿದ್ಯುತ್ ಸಂಪರ್ಕ ಒದಗಿಸುವ ಕಾರ್ಯವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರಲ್ಲಿ ಬಾಕಿ ಇದ್ದು ಆಗಸ್ಟ್ 2000ರಲ್ಲಿ ರೂ. 1. 47 ಲಕ್ಷಗಳ ಠೇವಣಿ ಇಡಲಾಗಿದೆ. ಆಸ್ಪತ್ರೆಗೆ ಅಗತ್ಯವಾದ ರೂ. 1. 47 ಲಕ್ಷಗಳ ಠೇವಣಿ ಇಡಲಾಗಿದೆ. ಆಸ್ಪತ್ರೆಗೆ ಅಗತ್ಯವಾದ ಇತರೆ ಸಣ್ಣ ಕಾಮಗಾರಿಯನ್ನು 15. 11. 2000ರಂದು ಪೂರ್ಣಗೊಳಿಸಲಾಗಿದೆ.

(ಇ) (ಅ) ಪ್ರಶ್ನೆಯ ಉತ್ತರದಲ್ಲಿ ವಿವರಿಸಿರುವಂತೆ ಕಟ್ಟಡ ಕಾಮಗಾರಿಗಳೆಲ್ಲಾ ಪೂರ್ಣಗೊಂಡಿವೆ. ಆಸ್ಪತ್ರೆಗೆ ಹೆಚ್. ಟಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ ಬಾಕಿ ಉಳಿದಿದೆ. ಅನುಮೋದನೆ ದೊರೆತ ಕೂಡಲೇ ಹೆಚ್. ಟಿ. ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

(ಈ) ಈ ಆಸ್ಪತ್ರೆಗೆ ಅಗತ್ಯವಿರುವ 829 ಚಮೀ ವಿಸ್ತೀರ್ಣದಲ್ಲಿ ಹೊಸ ಕಟ್ಟಡ ನಿರ್ಮಿಸಿ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಲಾಗಿದೆ. 38 ಹಾಸಿಗೆಗಳ ಹೊಸ ವಾರ್ಡ್, ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿ, ಕ್ಷ-ಕಿರಣ ಕೊಠಡಿ, ಅಡಿಗೆ ಕೋಣೆ, ಗ್ಯಾರೇಜ್, ತುರ್ತು ಚಿಕಿತ್ಸಾ ವಿಭಾಗ, ಹಾಗೂ ರ್ಯಾಂಪ್ ಒದಗಿಸಿದೆ. ಇದರ ಜೊತೆಗೆ ಸಮರ್ಪಕ ನೀರಿನ ಸೌಲಭ್ಯ ಒದಗಿಸಲು ಓವರ್ ಹೆಡ್ ಟ್ಯಾಂಕ್, ಸಂಪ್ ಟ್ಯಾಂಕ್ ನಿರ್ಮಿಸಲಾಗಿದೆ. ಸಮರ್ಪಕ ವಿದ್ಯುತ್ ಸೌಲಭ್ಯ ಒದಗಿಸಲು ಟ್ರಾನ್ಸ್ ಫಾರ್ಮರ್ ಸಭ್ ಸ್ಟೇಷನ್, ಡಿ. ಜಿ. ರೂಮ್ ನಿರ್ಮಿಸಲಾಗಿದೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನಲ್ಲಿ ಶಿಕ್ಷಕರಿಗೆ ವೇತನ ಪಾವತಿಸದೇ ಇರುವುದು

672 (1111) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನಲ್ಲಿ ಯೋಜನೆ ಲೆಕ್ಕ ಶೀರ್ಷಿಕೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರಿಗೆ ಎಷ್ಟು ತಿಂಗಳಿಂದ ವೇತನ ಪಾವತಿಸಲು ಬಾಕಿ ಇರುತ್ತದೆ.

2) ನಿಯಮಿತವಾಗಿ ವೇತನ ಪಾವತಿ ಮಾಡದಿರಲು ಕಾರಣವೇನು?

3) ಇ) ಶಿಕ್ಷಕರಿಗೆ ಬಾಕಿ ವೇತನ ಎಂದು ಯಾವಾಗ ಪಾವತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

1) ಪ್ರಾಥಮಿಕ ಶಿಕ್ಷಕರುಗಳಿಗೆ 3 ತಿಂಗಳುಗಳು ಹಾಗೂ

2) ಪ್ರೌಢ ಶಾಲಾ ಶಿಕ್ಷಕರುಗಳಿಗೆ 2 ತಿಂಗಳುಗಳ ವೇತನ ಬಾಕಿ ಇರುತ್ತದೆ.

2) ಅನುದಾನ ಕೊರತೆಯಿಂದ

3) ಹೆಚ್ಚುವರಿ ಆಯವ್ಯಯ ಬಿಡುಗಡೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಸಧ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು.

ತೀರ್ಥಹಳ್ಳಿ ಜೆ.ಸಿ.ಆಸ್ಪತ್ರೆ ಕಟ್ಟಡದ ಕಾಮಗಾರಿ

673 (1113) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ತೀರ್ಥಹಳ್ಳಿಯಲ್ಲಿ ಕರ್ನಾಟಕ ಆರೋಗ್ಯ ಪದ್ದತಿ ಯೋಜನೆಯಡಿ ಕಟ್ಟುತ್ತಿರುವ ಜೆ.ಸಿ.ಆಸ್ಪತ್ರೆಯ ಅಂದಾಜು ಮೊತ್ತವೆಷ್ಟು?

ಆ) ಕಟ್ಟಡ ಕಾಮಗಾರಿಯ ನಿರ್ಮಾಣ ಅವಧಿ ಎಷ್ಟು?

ಇ) ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು?

ಈ) ಇದುವರೆಗೂ ಖರ್ಚಾದ ಮೊತ್ತವೆಷ್ಟು? ಖರ್ಚು ಮಾಡಲಾದ ಅನುದಾನವನ್ನು ಯಾವ ಯಾವ ಬಾಬುಗಳಿಗೆ ಖರ್ಚು ಮಾಡಲಾಗಿದೆ?

ಉ) ಕಾಮಗಾರಿ ಎಂದು ಪೂರ್ಣಗೊಳ್ಳುತ್ತದೆ?

ಡಾ॥ ಎ.ಬಿ.ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರೂ. 18 1.42 ಲಕ್ಷಗಳು

ಆ) ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿ ಪಡಿಸಿರುವ ಗುತ್ತಿಗೆ ಅವಧಿ 18 ತಿಂಗಳು.

ಇ) ರೂ. 163. 50 ಲಕ್ಷಗಳು.

ಈ) ರೂ. 163. 50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಆಸ್ಪತ್ರೆಗೆ ಅಗತ್ಯವಿರುವ 2 143 ಚಮೀ ಹೊಸ ಕಟ್ಟಡ ನಿರ್ಮಿಸಿದ್ದು ಇದರಲ್ಲಿ ಆಸ್ಪತ್ರೆಯ ಈಗಿನ 50 ಹಾಸಿಗೆಗಳ ಸೌಲಭ್ಯದಿಂದ 100 ಹಾಸಿಗೆಗಳ ಸೌಲಭ್ಯಕ್ಕೆ ಅಗತ್ಯವಿರುವ ವಾರ್ಡ್‌ಗಳು, ಹೊರರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ, ಆಡಳಿತ ಕಛೇರಿ, ಕ್ಷ-ಕಿರಣ, ವಿಭಾಗ ಮತ್ತು ಫಾರ್ಮಸಿ ವಿಭಾಗಗಳನ್ನು ನಿರ್ಮಿಸಲಾಗಿದೆ.

ಅಲ್ಲದೆ ಈ ಕೆಳಗೆ ಕಾಣಿಸಿರುವ ಸೌಲಭ್ಯಗಳನ್ನು ಸಹಾ ಒದಗಿಸಲಾಗಿದೆ.

2 ವೈದ್ಯರುಗಳ ವಸತಿ ಗೃಹ ಮತ್ತು 2 ದಾದಿಯರ ವಸತಿ ಗೃಹಗಳ ನಿರ್ಮಾಣ, ಹಳೆ ಆಸ್ಪತ್ರೆ ಹಾಗೂ ಹಾಲಿ ಇರುವ ವಸತಿಗೃಹಗಳ ನವೀಕರಣ, ಹೊಸ ವಿದ್ಯುತ್ ವ್ಯವಸ್ಥೆ, ನೀರು ಸರಬರಾಜಿಗೆ ನೆಲ ತೊಟ್ಟಿ